# ಪುರಸಭಾ ಕಾರ್ಯಾಲಯ,ಹೊಳೆನರಸೀಪುರ

ದೂರವಾಣಿ ಸಂಖ್ಯೆ: 08175–273229

Email: itstaff_ulb_holenarsipur@yahoo.co.in

Website: www.holenarasipurtown.gov.in

ಸಂಖ್ಯೆ:ಪುಸಹೊನಪುರ:ಆಶ್ರಯ/ಸಿ.ಆರ್/ **1/2019–20** ದಿನಾಂಕ: **18.06.2019**

## ::ಸಾರ್ವಜನಿಕ ಪ್ರಕಟಣೆ::

ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ವಾಸವಾಗಿರುವ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೊಂಡಿರುವ ಹಾಗೂ ಪಡಿತರ ಚೀಟಿ ಹೊಂದಿರುವ ವಸತಿ ರಹಿತ ಹಾಗೂ ಆರ್ಥಿಕವಾಗಿ ಹಿಂದುಳಿದವರಿಂದ ವಸತಿ/ನಿವೇಶನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿ ಪುರಸಭೆಯಿಂದ ವಸತಿ/ನಿವೇಶನ ರಹಿತರ ಪಟ್ಟಿಯನ್ನು ಸಿದ್ದಪಡಿಸುವಂತೆ ಮಾನ್ಯ ಲೋಕೋಪಯೋಗಿ ಸಚಿವರು ಹಾಗು ಹಾಸನ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯ ಸಭಾಂಗಣದಲ್ಲಿ ದಿನಾಂಕ:15.06.2019 ರಂದು ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸೂಚಿಸಿರುತ್ತಾರೆ.

ಅದರಂತೆ ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ವಾಸವಾಗಿರುವ ಆರ್ಥಿಕವಾಗಿ ಹಿಂದುಳಿದ ವಸತಿ/ನಿವೇಶನ ರಹಿತರುಗಳಿಂದ ಈಗಾಗಲೇ **"ಸರ್ವರಿಗೂ ಸೂರು 2022"** ರ **"ಹೌಸಿಂಗ್ ಫಾರ್ ಆಲ್"** ಯೋಜನೆಯಡಿ ವಸತಿ/ನಿವೇಶನ ರಹಿತರುಗಳಿಂದ ಅಗತ್ಯ ದಾಖಲಾತಿಗಳನ್ನು ಪಡೆದು ವಿವರಗಳನ್ನು ಅಂತರ್ಜಾಲದಲ್ಲಿ ಅಳವಡಿಸಲಾಗಿದೆ. ಈ ಹಿಂದೆ ವಸತಿ/ನಿವೇಶನ ರಹಿತರುಗಳು ನಿಗಧಿತ ನಮೂನೆಯಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸದಿದ್ದಲ್ಲಿ ನಿಗಧಿತ ಅರ್ಜಿ ನಮೂನೆಗಳನ್ನು ಪುರಸಭೆಯಿಂದ ಪಡೆದು ಅಗತ್ಯ ದಾಖಲಾತಿಗಳಾದ, ಬಿ.ಪಿ.ಎಲ್ ಕಾರ್ಡ್, ಗಂಡ ಮತ್ತು ಹೆಂಡತಿಯ ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಬ್ಯಾಂಕ್ ಪಾಸ್ ಬುಕ್, ಜಾತಿ ಮತ್ತು ಆದಾಯ ಪತ್ರಗಳೊಂದಿಗೆ ದಿನಾಂಕ:04.07.2019 ರ ಒಳಗಾಗಿ ಈ ಪುರಸಭೆಗೆ ಸಲ್ಲಿಸಿ, ಸ್ವೀಕೃತಿಯನ್ನು ಪಡೆಯಬಹುದಾಗಿರುತ್ತದೆ.

(ಬಿ.ಸಿ ಬಸವರಾಜು)
ಮುಖ್ಯಾಧಿಕಾರಿಗಳು,
ಪುರಸಭೆ, ಹೊಳೆನರಸೀಪುರ.

(ಡಾ॥ಹೆಚ್.ಎಲ್ ನಾಗರಾಜು ಕೆ.ಎ.ಎಸ್)
ಆಡಳತಾಧಿಕಾರಿಗಳು,ಪುರಸಭೆ, ಹೊಳೆನರಸೀಪುರ ಹಾಗೂ
ಉಪವಿಭಾಗಾದಿಕಾರಿಗಳು ಹಾಸನ ಉಪವಿಭಾಗ. ಹಾಸನ.

# ನಗರಸಭಾ ಕಾರ್ಯಾಲಯ, ಹಾಸನ

ಹಾಸನ ನಗರ ಸಭಾ ವ್ಯಾಪ್ತಿಯಲ್ಲಿ ವಾಸವಾಗಿದ್ದು, ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಲ್ಪಟ್ಟಿರುವ, ನಿವೇಶನ/ವಸತಿ ರಹಿತರು, ನಿವೇಶನ/ವಸತಿಗಾಗಿ ಸಲ್ಲಿಸಿರುವ ಅರ್ಜಿ.

ಅರ್ಜಿದಾರರು ನಗರಸಭೆ ವ್ಯಾಪ್ತಿಯಲ್ಲಿ ನಿವೇಶನ/ವಸತಿಯನ್ನು ಹೊಂದಿಲ್ಲದೇ ಇರುವ ಬಗ್ಗೆ ಮತ್ತು ಸರ್ಕಾರದಿಂದ ಈ ಹಿಂದೆ ವಸತಿ ಸೌಲಭ್ಯವನ್ನು ಪಡೆಯದೇ ಇರುವ ಬಗ್ಗೆ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

ವಾರ್ಡ್ ನಂ

| | | |
|---|---|---|
| 1 | ಅರ್ಜಿದಾರರ ಹೆಸರು : | |
| 2 | ಅರ್ಜಿದಾರರ ತಂದೆ/ಗಂಡನ ಹೆಸರು: | |
| 3 | ಅರ್ಜಿದಾರರ ವಯಸ್ಸು: | |
| 4 | ಲಿಂಗ | ಗಂಡು/ಹೆಣ್ಣು |
| 5 | ಅರ್ಜಿದಾರರ ಪೂರ್ಣ ವಿಳಾಸ ಮತ್ತು ವಾರ್ಡ್ ಸಂಖ್ಯೆ: | |
| 6 | ಅರ್ಜಿದಾರರು ನಿವೇಶನ ಹೊಂದಿದ್ದಾರೆಯೇ? ಹೊಂದಿದ್ದರೆ ದಾಖಲಾತಿಗಳನ್ನು ಲಗತ್ತಿಸುವುದು. | ಹೌದು/ಇಲ್ಲ |
| 7 | ಅರ್ಜಿದಾರರ ಬಿ.ಪಿ.ಎಲ್. ಕಾರ್ಡ್‌ನ ಜೆರಾಕ್ಸ್ ಪ್ರತಿ ಲಗತ್ತಿಸಬೇಕು. | ಲಗತ್ತಿಸಿದೆ/ಲಗತ್ತಿಸಿಲ್ಲ |
| 8 | ಅರ್ಜಿದಾರರ ಆಧಾರ್ ನಂ: (ಆದಾರ್ ಕಾರ್ಡಿನ ಜೆರಾಕ್ಸ್ ಪ್ರತಿ ಲಗತ್ತಿಸಬೇಕು) | ನಂ:<br>ಲಗತ್ತಿಸಿದೆ/ಲಗತ್ತಿಸಿಲ್ಲ |
| 9 | ಅರ್ಜಿದಾರರ ಮೊಬೈಲ್ ನಂ: | ನಂ: |
| 10 | ಮತದಾರರ ಗುರುತಿನ ಚೀಟಿಯ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಬೇಕು. | ಲಗತ್ತಿಸಿದೆ/ಲಗತ್ತಿಸಿಲ್ಲ |
| 11 | ಆದಾಯ ಮತ್ತು ಜಾತಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿ ಕಡ್ಡಾಯವಾಗಿ ಲಗತ್ತಿಸಬೇಕು: | ಲಗತ್ತಿಸಿದೆ/ಲಗತ್ತಿಸಿಲ್ಲ |

ಈ ಮೇಲ್ಕಂಡ ಎಲ್ಲಾ ಅಂಶಗಳು ನನಗೆ ತಿಳಿದಿರುವ ಮಟ್ಟಿಗೆ ಸತ್ಯವಾಗಿರುತ್ತದೆ. ಹಾಗೂ ಈ ಹಿಂದೆ ಸರ್ಕಾರದ ಯೋಜನೆಡಿ ಯಾವುದೇ ನಿವೇಶನ/ವಸತಿ ಸೌಲಭ್ಯ ಪಡೆದಿರುವುದಿಲ್ಲ, ಎಂದು ದೃಢೀಕರಿಸುತ್ತೇನೆ.

ಸ್ಥಳ:

ಅರ್ಜಿದಾರರ ಸಹಿ

ದಿನಾಂಕ:

ಸೂಚನೆ:- ಭರ್ತಿ ಮಾಡಿದ ಅರ್ಜಿಯನ್ನು ಪೂರ್ಣ ದಾಖಲೆಗಳೊಂದಿಗೆ ನಗರಸಭೆಯ ಕಾರ್ಯಾಲಯದಲ್ಲಿ ತೆರೆಯಲಾಗಿರುವ ವಿಶೇಷ ಕೌಂಟರ್‌ನಲ್ಲಿ ಸಲ್ಲಿಸಬಹುದಾಗಿದೆ.

ನಗರಸಭಾ ಕಾರ್ಯಾಲಯ, ಹಾಸನ.
ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ,
ಹಾಸನ. 573201

ದೂರವಾಣಿ: 08172- 268276
ಸಹಾಯವಾಣಿ: 08172-233702 ಫ್ಯಾಕ್ಸ್: 08172-234792
web: http://www.hassancity.gov.in
Email: commn_hassan@yahoo.com

ನಂ.ನಸಹಾ:ನಗರ ಆಶ್ರಯ:2019-20 ದಿನಾಂಕ:17-6-2019

## : ಪತ್ರಿಕಾ ಪ್ರಕಟಣೆ :

ಹಾಸನ ನಗರಸಭಾ ವ್ಯಾಪ್ತಿಯಲ್ಲಿ ವಾಸವಾಗಿದ್ದು, ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೊಂಡಿರುವ, ವಸತಿ ರಹಿತ ಹಾಗೂ ಆರ್ಥಿಕವಾಗಿ ಹಿಂದುಳಿದವರಿಂದ ವಸತಿ/ನಿವೇಶನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿ, ಹಾಸನ ನಗರಸಭೆಯಲ್ಲಿ ವಸತಿ/ನಿವೇಶನ ರಹಿತರ ಪಟ್ಟಿಯನ್ನು ಸಿದ್ಧಪಡಿಸಲು ಮಾನ್ಯ ಲೋಕೋಪಯೋಗಿ ಸಚಿವರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:15-6-2019 ರಂದು ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸೂಚನೆ ನೀಡಲಾಗಿರುತ್ತದೆ.

ಅದರಂತೆ ಹಾಸನ ನಗರಸಭಾ ವ್ಯಾಪ್ತಿಯಲ್ಲಿ ವಾಸವಾಗಿರುವ ವಸತಿ/ನಿವೇಶನ ರಹಿತ ಹಾಗೂ ಆರ್ಥಿಕವಾಗಿ ಹಿಂದುಳಿದವರಿಂದ ವಸತಿ/ನಿವೇಶನ ಸೌಲಭ್ಯಕ್ಕಾಗಿ ಹಾಸನ ನಗರಸಭೆಯಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗಧಿತ ಅರ್ಜಿ ನಮೂನೆಯನ್ನು ದಿನಾಂಕ:21-6-2019 ರಿಂದ ನಗರಸಭೆಯಲ್ಲಿ ತೆರೆಯಲಾಗಿರುವ ವಿಶೇಷ ಕೌಂಟರ್‌ನಲ್ಲಿ ನೀಡಲಾಗುವುದು. ಅಗತ್ಯ ದಾಖಲಾತಿಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ:29-6-2019ರ ರೊಳಗಾಗಿ ವಿಶೇಷ ಕೌಂಟರ್‌ನಲ್ಲಿ ನೀಡಿ ಸ್ವೀಕೃತಿ ಪಡೆಯಬಹುದಾಗಿರುತ್ತದೆ.

ಪೌರಾಯುಕ್ತರು
ನಗರಸಭೆ, ಹಾಸನ

(ಅಕ್ರಂ ಪಾಷ ಭಾ.ಆ.ಸೇ)
ಆಡಳಿತಾಧಿಕಾರಿಗಳು ನಗರಸಭೆ ಹಾಸನ
ಹಾಗೂ ಜಿಲ್ಲಾಧಿಕಾರಿಗಳು ಹಾಸನ ಜಿಲ್ಲೆ ಹಾಸನ